ಸಿ.ಸಿ ನಂಬ್ರ: 1018/2023
ಪಿ.ಡಬ್ಲ್ಯೂ : 2

ದಿನಾಂಕ: 30-07-2025 ರಂದು ಸಾಕ್ಷಿಗೆ ಪ್ರಮಾಣ ವಚನ ಮಾಡಿಸಲಾಗಿದೆ

ಪಾಟೀ ಸವಾಲು: ಆರೋಪಿ ಪರ ಶ್ರೀ ಆರ್ ಕೆ ಎಮ್ ವಕೀಲರಿಂದ

2021 ರ ಮೀನುಗಾರಿಕಾ ರುತುವಿಗೆ ಸಂಬಂಧಪಟ್ಟ ವ್ಯವಹಾರ. ವ್ಯವಹಾರದ ರುತು ಅಗಸ್ಟನಲ್ಲಿ ಪ್ರಾರಂಭವಾಗಿ ಮೇ ನಲ್ಲಿ ಮುಗಿಯುತ್ತದೆ. ಹವಾಮಾನ ವೈಪತ್ಯದಿಂದ ಬೇರೆ ಬೇರೆ ತಿಂಗಳಿನಲ್ಲಿ ಪ್ರಾರಂಭವಾಗಬಹುದು ಎಂದು ನುಡಿಯುತ್ತಾರೆ. ಆರೋಪಿತಳು ನಮ್ಮ ಸಂಸ್ಥೆಯಲ್ಲಿ ವ್ಯವಹರಿಸಿದ್ದಕ್ಕೆ ಸಂಬಂಧಪಟ್ಟಂತೆ ಮೀನು ಹಾಗೂ ಮೀನು ಉತ್ಪನ್ನಗಳನ್ನು ಪಡೆಯಲು ನೀಡುವ ಅರ್ಜಿ, ಭದ್ರತಾ ಠೇವಣಿ ಅರ್ಜಿ. ಈಗ ದೂರುದಾರರ ಸಂಸ್ಥೆಯನ್ನು ಪ್ರತಿನಿಧಿಸಿ 40 ಪ್ರಕರಣಗಳನ್ನು ದಾಖಲಿಸಿರುತ್ತೇನೆ 2 ಪ್ರಕರಣಗಳಲ್ಲಿ ಸಾಕ್ಷಿ ನುಡಿದಿರುತ್ತೇನೆ. ವ್ಯವಹಾರಸ್ಥರು ಸಾಲದ ವ್ಯವಸ್ಥೆಬೇಕು ಅಂತಾ ಹೇಳಿ ಅರ್ಜಿ ಸಲ್ಲಿಸಬೇಕಾ ಎಂದರೆ ಸಾಕ್ಷಿ ಹೌದು ಎಂದು ನುಡಿಂದುಯುತ್ತಾರೆ. ಈ ಪ್ರಕರಣದಲ್ಲಿ ಜಾಮೀನುದಾರರು ಇದ್ದಾರೆ. ಸಾಕ್ಷಿ ಪುನಃ ಈ ಪ್ರಕರಣದಲ್ಲಿ ಮುಖ್ಯ ಸಾಲಗಾರರೇ ಶ್ರೀಕಾಂತ ಬಿಲ್ಲವ ಇರುತ್ತಾರೆ. ಆರೋಪಿತನು ಜಾಮೀನುದಾರರು ಇರುತ್ತಾರೆ. ಆರೋಪಿತನನ್ನು ಹೊರತು ಪಡಿಸಿ ಇನ್ನೊಬ್ಬ ಜಾಮೀನುದಾರರ ಹೆಸರು ಶ್ರೀಮತಿ. ಶೋಭಾ.

2. ಶ್ರೀಕಾಂತ ಬಿಲ್ಲವರವರ ವಿರುದ್ಧ ಸಹ ಇದೇ ವ್ಯವಹಾರಕ್ಕೆ ಸಂಬಂಧಪಟ್ಟಂತೆ ಚೆಕ್ಕು ಅಮಾನೀಕರಣ ಪ್ರಕರಣವನ್ನು ಸಲ್ಲಿಸಿರುತ್ತೇನೆ. ಆ ಚೆಕ್ಕಿನ ಮೊತ್ತ ರೂ. 13,51,587/- ಇರುತ್ತದೆ. ಇನ್ನೊಬ್ಬ ಜಾಮೀನುದಾರರ ಮೇಲೂ ಸಹ ಚೆಕ್ಕು ಅಮಾನೀಕರಣ ಪ್ರಕರಣ ಸಲ್ಲಿಸಿದ್ದು, ರೂ.10,00,000/- ಇರುತ್ತದೆ. ಈ ಪ್ರಕರಣದ ದೂರಿನಲ್ಲಿ ಎಲ್ಲಿಯೂ ಸಹ ಆರೋಪಿತನು ಜಾಮೀನುದಾರನು ಅಂತಾ ಕಾಣಿಸಿರುವುದಿಲ್ಲ ಎಂದರೆ ಸಾಕ್ಷಿ ಆತ ಜಾಮೀನುದಾರ ಇರುತ್ತಾನೆ. ದುರುದ್ದೇಶದಿಂದ ಆ ಹೆಸರನ್ನು ದೂರಿನಲ್ಲಿ ಕಾಣಿಸಿರುವುದಿಲ್ಲ ಎಂದರೆ ಸರಿಯಲ್ಲ. ಅದೇ ರೀತಿ ಈ ವ್ಯವಹಾರಕ್ಕೆ ಸಂಬಂಧಪಟ್ಟಂತೆ ಮುಖ್ಯ ಸಾಲಗಾರ ಶ್ರೀಕಾಂತ ಬಿಲ್ಲವ ಎಂದು ಕಾಣಿಸಿರುವುದಿಲ್ಲ ಎಂದರೆ ಸರಿಯಲ್ಲ. ಅದೇ ರೀತಿ ಈ ವ್ಯವಹಾರಕ್ಕೆ ಮತ್ತೊಬ್ಬ ಜಾಮೀನುದಾರ ಇರುತ್ತಾರೆ ಎಂದು ಕಾಣಿಸಿರುವುದಿಲ್ಲ ಎಂದರೆ ಸರಿಯಲ್ಲ.

3. ನಾನು ಫಿರ್ಯಾದುದಾರರ ಸಂಸ್ಥೆಯ ಉದ್ಯೋಗಿಯಾಗಿರುತ್ತೇನೆ. ಆಡಳಿತ ಮಂಡಳಿಯಲ್ಲಿ ಸ್ವಸಹಾಯ ಸಂಘದ ಸದಸ್ಯರೆಲ್ಲರು ಇದ್ದರು. ಅವರ ಸಂಖ್ಯೆ 13. ಸಾಕ್ಷಿಯು ಪುನಃ ಸಕ್ರಿಯ ಸದಸ್ಯರ ಸಂಖ್ಯೆ 13 ಎಂದು ನುಡಿಯುತ್ತಾರೆ. ಈ ಪ್ರಕರಣಕ್ಕೆ ಸಂಬಂಧಿಪಟ್ಟಂತೆ 57

ಬಾರಿ ಮೀನುಗಳ ಹರಾಜು ಆಗಿರುತ್ತದೆ. ಹರಾಜು ಪ್ರಾಗಂಣದಲ್ಲಿ ಮೀನುಗಳ ಹರಾಜು ಆಗುತ್ತದೆ. ಮೀನುಗಳನ್ನು ಹರಾಜುಮಾಡುವ ಸಿಬ್ಬಂದಿಗಳು ವಿಜಯ ಖಾರ್ವಿ, ಮಹೇಶ ಪಂಡಿತ್, ರಾಮದಾಸ ಪೂಜಾರಿ ಮತ್ತು ಎಲಂ ಸಿಬ್ಬಂದಿಗಳು ಇರುತ್ತಾರೆ. ಇವರುಗಳಲ್ಲಿ ಹರಾಜು ಆಗುವಾಗ ಅಲ್ಲಿ ಯಾರು ಇದ್ದರು ಎಂದು ನನಗೆ ಹೇಳಲು ಆಗುವುದಿಲ್ಲ ಎಂದರೆ ಸರಿ. ಯಾವ ಯಾವ ದಿನ ಮೊಬಲಗಿಗೆ ಹರಾಜು ಆಗಿರುತ್ತದೆ ಎಂದು ನನಗೆ ಈಗ ಹೇಳಲು ಸಾಧ್ಯವಿಲ್ಲ ಎಂದರೆ ಸರಿ.

4. ನಮ್ಮ ಸಂಸ್ಥೆ ಸಹಕಾರಿ ಸಂಘ ಉಡುಪಿ ಕಚೇರಿಯಲ್ಲಿ ನೊಂದಣಿಯಾಗಿರುತ್ತದೆ. ಸ್ವಸಹಾಯ ಸಂಘ 2005-06 ರಲ್ಲಿ ನೊಂದಣಿಯಾಗಿರುತ್ತದೆ. ನೊಂದಣಿಯಾದ ಬಗ್ಗೆ ದಾಖಲೆಗಳು ಇರುತ್ತದೆ. ನಮ್ಮಲ್ಲಿ ಲೆಡ್ಜರನ್ನು ಕಾಪಾಡಿಕೊಂಡು ಬರುತ್ತೇವೆ. ಅದನ್ನು ದಿನ ದಿನವೂ ಬರೆಯುತ್ತೇವೆ. ಆರೋಪಿತಳಿಗೆ ಸಂಬಂದಪಟ್ಟ ಖಾತೆಯ ಲೆಡ್ಜರ ನಂಬ್ರ ನನಗೆ ಹೇಳಲು ಸಾಧ್ಯವಿಲ್ಲ. ನಾವು ಲೆಕ್ಕಪರಿಶೋಧನೆಗೆ ಒಳಪಡಿಸಿರುತ್ತೇವೆ. ನಮ್ಮದು ಖಾಸಗಿ ಆಡಿಟ್ ಆಗಿರುತ್ತದೆ. ಈ ವ್ಯವಹಾರಕ್ಕೆ ಸಂಬಂಧಪಟ್ಟಂತೆ ಲೆಕ್ಕ ಪರಿಶೋಧನೆ ನಡೆದಿರುತ್ತದೆ. ಅದರಲ್ಲಿ ಅಸಲು ಬಾಕಿ ರೂ.30,28,043/- ಅಂತಾ ಕಾಣಿಸುತ್ತದೆ. ಬಡ್ಡಿ ರೂ.3,23,544/- ಅಂತಾ ಕಾಣಿಸುತ್ತದೆ. ನಾವು ವಿಧಿಸಿದ ಬಡ್ಡಿಯ ದರ 12%. ಜುಲ್ಮಾನೆ ಬಡ್ಡಿ ಇರುವುದಿಲ್ಲ. ಆರೋಪಿತಳು ನಾವು ಹೇಳಿದ ಬಡ್ಡಿಯನ್ನು ಒಪ್ಪಿರುತ್ತಾಳೆ ಎಂದು ತೋರಿಸಲು ಯಾವ ದಾಖಲೆಗಳು ಇರುತ್ತವೆ ಎಂದರೆ ಕರಾರು, ಭದ್ರತಾ ಠೇವಣಿ ಅರ್ಜಿಗಳಲ್ಲಿ ನಮೂದು ಇರುತ್ತದೆ ಎಂದು ನುಡಿಯುತ್ತಾರೆ.

5. ಆರೋಪಿತನಿಂದ ಬಡ್ಡಿಯ ದರಕ್ಕೆ ಸಂಬಧಪಟ್ಟಂತೆ ದಾಖಲೆಗಳನ್ನು ಮಾಡಿಕೊಳ್ಳುವಾಗ ಯಾರು ಇದ್ದರು ಎಂದು ನನಗೆ ಹೇಳಲು ಸಾಧ್ಯವಿಲ್ಲ. ಮೀನು ಮಾರಾಟ ಮಾಡಲು ಮೀನನ್ನು ಕಡದಲ್ಲಿಯೂ ಕೊಡುತ್ತೇವೆ ಅವರು ನಗದು ಕೊಟ್ಟರು ಸಹ ತೆಗೆದುಕೊಳ್ಳುತ್ತೇವೆ. ನಗದು ಹಣಕ್ಕೆ ಪ್ರತ್ಯೇಕ ಪುಸ್ತಕ ಅಂತಾ ಇಟ್ಟಿರುವುದಿಲ್ಲ, ಒಂದೆ ಪುಸ್ತಕದಲ್ಲಿ ಎಲ್ಲವನ್ನು ಬರೆದುಕೊಳ್ಳುತ್ತೇವೆ ನಗದುಕೊಟ್ಟರು ಸಹ ಸ್ವೀಕರಿಸುತ್ತೇವೆ. ಪುಸ್ತಕ ಮುದ್ರಿತ ಇರುತ್ತದೆ. ಕೈಯಲ್ಲಿ ಬರೆಯುತ್ತೇವೆ ಎಂದು ನುಡಿಯುತ್ತಾರೆ. ಪುಸ್ತಕ್ಕೆ ಬೇರೆ ಹೆಸರು ಇರುವುದಿಲ್ಲ. ಅದನ್ನು ದ್ವಿಪ್ರತಿಯಲ್ಲಿ ಕಾಪಾಡಿಕೊಂಡು ಬರುತ್ತೇವೆ. ಅದರ ಪ್ರಥಮ ಪ್ರತಿಯನ್ನು ವ್ಯಾಪಾರಸ್ಥರಿಗೆ ಕೊಡುತ್ತೇವೆ. 2 ನೇ ಪ್ರತಿ ನಮ್ಮ ಬಳಿ ಇರುತ್ತದೆ. ಅದು ಕಾರ್ಬನ್ ಕಾಪಿ. ಈ ವ್ಯವಹಾರಕ್ಕೆ ಸಂಬಂಧಪಟ್ಟಂತೆ ಎಷ್ಟು ರಸೀದಿಗಳು ಇರುತ್ತದೆ ಎಂದರೆ ಸಾಕ್ಷಿ ಹಣ ಪಾವತಿಸಿದಕ್ಕೆ 13 ರಸೀದಿಗಳು ಇರುತ್ತದೆ. ಕಡ ಮಾಡಿಕೊಂಡ ಬಗ್ಗೆ 57 ರಸೀದಿಗಳು ಇರುತ್ತದೆ. ಕಡ ಮಾಡಿಕೊಂಡ ರಸೀದಿಯಲ್ಲಿ ಪ್ರಕ್ರಿಯೆಯಲ್ಲಿ ಭಾಗವಹಿಸಿದವರು ಹಾಗೂ ಕಡ

ತೆಗೆದುಕೊಂಡವರ ಸಹಿ ತೆಗೆದುಕೊಂಡಿರುತ್ತೇವೆ. ನಮ್ಮ ಬಳಿ ಇರುವಂತಹ ದಾಖಲೆಗಳಲ್ಲಿ ಆರೋಪಿತನ ಎಷ್ಟು ಸಹಿ ಇರುತ್ತದೆ ಎಂದರೆ ಸಾಕ್ಷಿ ದಾಖಲೆ ನೋಡಿ ಹೇಳಬೇಕು ಎಂದು ನುಡಿಯುತ್ತಾರೆ. ಮುಖ್ಯ ಸಾಲಗಾರರ ಸಹಿ ಎಷ್ಟು ಇರುತ್ತದೆ ಎಂದರೆ ಸಾಕ್ಷಿ ಎಲ್ಲರೂ ಹಾಕಿ ಹೋಗುತ್ತಾರೆ ನಾನು ದಾಖಲೆ ನೋಡಿ ಉತ್ತರಿಸಬೇಕು ಎಂದು ನುಡಿಯುತ್ತಾರೆ. ಕ್ರೇಡಿಟ್ ಬಿಲ್ಲುಗಳಲ್ಲಿ ವ್ಯಾಪಾರಸ್ಥರ ಸಹಿ ಇಲ್ಲದೇ ಇದ್ದರೇ ಆರ್ಥಿಕ ಬದ್ಧತೆ ಇರುವುದಿಲ್ಲ ಎಂದರೆ ಸರಿ.

6. ಸೈಯದ್ ಜೊತೆ ವ್ಯವಹರಿಸಿದಕ್ಕೆ ಸಂಬಂಧ ಪಟ್ಟ ದಾಖಲೆಗಳು ಒಂದಕ್ಕಿಂತ ಹೆಚ್ಚು ಪುಸ್ತಕಗಳಿಗೆ ಚದುರಿ ಹೋಗಿರುತ್ತದೆ. ನಾನು ಹೇಳಿದಂತೆ ಯಾವುದೇ ರಸೀದಿಗಳು ನಮ್ಮ ಸಂಸ್ಥೆಯಲ್ಲಿ ಇರುವುದಿಲ್ಲ ಎಂದರೆ ಸರಿಯಲ್ಲ. ನಮ್ಮ ಯಾವುದೇ ದಾಖಲೆಗಳಲ್ಲಿಯೂ ಶೋಭಾರವರ ಸಹಿ ಇರುವುದಿಲ್ಲ ಎಂದರೆ ಸರಿಯಲ್ಲ. ಸೈಯದರವರ ಸಹಿ ಇರುವಂತ ದಾಖಲೆಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇವೆ. ವ್ಯವಹಾರಕ್ಕೆ ಸಂಬಂಧಪಟ್ಟಂತೆ ಉಪ ನಿಯಮಗಳು ಇರುತ್ತವೆ. 2005-06 ರಿಂದ ಆ ಉಪ ನಿಯಮಗಳನ್ನು ಪಾಲಿಸುತ್ತಿರುತ್ತೇವೆ. ಉಪ ನಿಯಮಗಳಲ್ಲಿ ಯಾವ ರೀತಿ ಹರಾಜು ಪ್ರಕ್ರಿಯೆ ಮಾಡಬೇಕು ಹಾಗೂ ದಾಖಲೆಗಳನ್ನು ಯಾವ ರೀತಿ ಕಾಪಾಡಬೇಕು ಎಂದು ಉಪ ನಿಯಮದಲ್ಲಿ ನಮೂದಿಸಿರುತ್ತದೆ ಎಂದರೆ ಸರಿ. ಮೊದಲು ಮಾಡಿದ ಉಪ ನಿಯಮಗಳು ಈಗಲೂ ಹಾಗೆ ಇರುತ್ತವೆ.

7. ಸಾಲಕ್ಕೆ ಗರಿಷ್ಠ ಮಿತಿಯನ್ನು ನಿಗದಿಪಡಿಸಿರುತ್ತೇವೆ ಸದರಿ ಪ್ರಕರಣಕ್ಕೆ ಸಂಬಂಧಪಟ್ಟಂತೆ ರೂ.35,00,000/- ಗರಿಷ್ಠ ಮಿತಿಯಾಗಿರುತ್ತದೆ. ಅವರು ಹಣವನ್ನು ಆಗಿಂದಾಗಲೇ ಕೊಡುತ್ತಾ ಹೋಗುತ್ತಾರೆ. ನಿಗದಿತ ಹಣಕ್ಕಿಂತ ಜಾಸ್ತಿಯಾದರೆ ಸಾಲವನ್ನು ಕೊಡುವುದಿಲ್ಲ ಎಂದು ನುಡಿಯುತ್ತಾರೆ. ಲೆಡ್ಜರ ದಾಖಲೆಯನ್ನು ದಿನದಿಂದ ದಿನಕ್ಕೆ ಮಾಡುತ್ತೇವೆ. ಜೂನ ನಂತರ ಬಡ್ಡಿಯನ್ನು ವಿಧಿಸುತ್ತೇವೆ. ಮೀನು ಹರಾಜು ಮಾಡುವಾಗ ಬಿಡ್ ಮಾಡುವುದನ್ನು ದಾಖಲೆ ಮಾಡಿಕೊಳ್ಳುತ್ತೇವೆ. ಈ ಪ್ರಕರಣದಲ್ಲಿ ಮುಖ್ಯ ಸಾಲಗಾರರಿಗೆ ತಗಾದೆ ನೋಟಿಸು ಕೊಟ್ಟಿರುತ್ತೇವೆ. ಚೆಕ್ ಬೌನ್ಸ ಪ್ರಕರಣವನ್ನು ಹೊರತುಪಡಿಸಿ ಸಾಲಗಾರರ ಮೇಲೆ ಯಾವುದೇ ಪ್ರಕರಣ ದಾಖಲಿಸಿರುವುದಿಲ್ಲ. ನಮ್ಮ ಬಳಿ ಯಾವುದೇ ದಾಖಲೆ ಇಲ್ಲದೇ ಇರುವುದರಿಂದ, ಈ ಪ್ರಕರಣ ಸುಳ್ಳಾಗಿರುವುದರಿಂದ ಯಾವುದೇ ಬೇರೆ ಪ್ರಕರಣವನ್ನು ದಾಖಲಿಸಿರುವುದಿಲ್ಲ ಎಂದರೆ ಸರಿಯಲ್ಲ.

8. ಆರೋಪಿತರ ವಿದ್ಯಾಭ್ಯಾಸ ಗೊತ್ತಿರುವುದಿಲ್ಲ. ಆರೋಪಿತಳು ಹಿಂದುಳಿದ ಬಡ ಮುಸ್ಲಿಂ ಎಂದರೆ ಸರಿಯಲ್ಲ. ಆರೋಪಿತಳಿಂದ ಸಹಿ ಮಾಡಿದ ಖಾಲಿ ಚೆಕ್ಕನ್ನು ಪಡೆದುಕೊಂಡಿರುತ್ತೇವೆ ಎಂದರೆ ಸರಿಯಲ್ಲ. ಉಳಿದೆರಡು ಸಿಸಿ ನಂಬರ ನೆನಪಿಲ್ಲ. ಆ ಚೆಕ್ಕು ಬೌನ್ಸ ಕೇಸು ಇದೇ

ನ್ಯಾಯಾಲಯದಲ್ಲಿ ಇವತ್ತೆ ಇರುತ್ತದೆ. ಶೋಭಾರವರ ಮೇಲೆ 851/2023 ಎಂದು ಪ್ರಕರಣ ಸಲ್ಲಿಸಿರುತ್ತೇವೆ ಎಂದು ನುಡಿಯುತ್ತಾರೆ.

9. ಈ ವ್ಯವಹಾರದ ಮುಖ್ಯ ಸಾಲಗಾರರ ಮೇಲೆ ಸಿಸಿ 264/2023 ರಂತೆ ಪ್ರಕರಣ ದಾಖಲಾಗಿರತ್ತದೆ ಎಂದರೆ ಸರಿ. ಅಕ್ರಮವಾಗಿ ಲಾಭ ಮಾಡಬೇಕು ಅಂತಾ ಎಲ್ಲರ ಮೇಲೆ ಚೆಕ್ಕು ಬೌನ್ಸ ಪ್ರಕರಣ ಸಲ್ಲಿಸಿರುತ್ತೇವೆ ಎಂದರೆ ಸರಿಯಲ್ಲ. ಒಂದು ಪ್ರಕರಣದಲ್ಲಿ ಇನ್ನೇರಡು ಪ್ರಕರಣದ ವಿಚಾರವನ್ನು ಹೇಳದೇ ದುರುದ್ದೇಶಪೂರ್ವಕವಾಗಿ ಮುಚ್ಚಿಟ್ಟಿರುತ್ತೇವೆ ಎಂದರೆ ಸರಿಯಲ್ಲ. ಈ ಪ್ರಕರಣದಲ್ಲಿ ಮುಖ್ಯ ಸಾಲಗಾರರಿಂದಾಗಲೀ ಜಾಮೀನುದಾರರಿಂದಾಗಲೀ ಯಾವುದೇ ಹಣ ಬರುವುದು ಬಾಕಿ ಇರುವುದಿಲ್ಲ ಎಂದರೆ ಸರಿಯಲ್ಲ. ಚೆಕ್ಕಿನಲ್ಲಿರುವ ಕೈಬರಹ ಯಾರದ್ದು ಎಂದು ಗೊತ್ತಿರುವುದಿಲ್ಲ. ಸಾಕ್ಷಿ ಅವರೇ ಬರೆದುಕೊಟ್ಟಿರುತ್ತಾರೆ. ಅವರು ನಮ್ಮ ಸಮಕ್ಷಮ ಬರೆದಿರುವುದಿಲ್ಲ. ಬರೆದುಕೊಂಡು ಬಂದಿರುತ್ತಾರೆ.

10. ಈ ಪ್ರಕರಣದಲ್ಲಿ ಮೀನುಗಾರಿಕಾ ರುತು ಮುಗಿದ ನಂತರ ದಿಃ 27-12-2022 ರಂದು ಚೆಕ್ಕನ್ನು ಕೊಟ್ಟಿರುತ್ತಾರೆ. ಚೆಕ್ಕು ಪಡೆಯುವ ಮಧ್ಯದಲ್ಲಿ ಒಂದು ನೋಟಿಸನ್ನು ಕೊಟ್ಟಿರುತ್ತೇವೆ. ಆ ಒಂದು ನೋಟಪಿಸನ್ನು ಪರತ್ಯೇ ಪ್ರತ್ಯೇಕವಾಗಿ ಕೊಟ್ಟಿರುತ್ತೇವೆ. ಆ ನೋಟಿಸನ್ನು ಮಹಮ್ಮದ ಸೈಯದರವರು ರೂ.33,51,587/- ಕೊಡಬೇಕು ಎಂದು ನಮೂದಿಸಿರುತ್ತೇವೆ. ಆ ನೋಟಿಸಿನ ಕಚೇರಿಯ ಪ್ರತಿ ನಮ್ಮ ಬಳಿ ಇರುತ್ತದೆ. ಅದನ್ನು ಹಾಜರುಪಡಿಸಲುತೊಂದರೆ ಇರುವುದಿಲ್ಲ. ನ್ಯಾಯಯುತವಾಗಿ ಪ್ರತಿಫಲದ ಬಗೆಗ ಕೊಟ್ಟಂತಹ ಚೆಕ್ಕು ಇದಲ್ಲ ಎಂದರೆ ಸರಿಯಲ್ಲ. ಚೆಕ್ಕಿನಲ್ಲಿ ಇರುವ ಕೈಬರಹ ನಮ್ಮ ಸಂಸ್ಥೆಯ ಸಿಬ್ಬಂದಿಗಳದ್ದು ಎಂದರೆ ಸರಿಯಲ್ಲ. ನಾನು ನನ್ನ ಮುಖ್ಯ ವಿಚಾರಣೆಯಲ್ಲಿ ಹೇಳಿದ್ದೆಲ್ಲಾ ಸುಳ್ಳು, ದೂರಿನಲ್ಲಿ ಹೇಳಿದ್ದೆಲ್ಲಾ ಸುಳ್ಳು ಎಂದರೆ ಸರಿಯಲ್ಲ.

11. ನನಗೆ ದೂರುದಾರರ ಸಂಘವನ್ನು ಪ್ರತಿನಿಧಿಸಲು ಯಾವುದೇ ಅಧಿಕಾರ ಇರುವುದಿಲ್ಲ ಎಂದರೆ ಸರಿಯಲ್ಲ. ಈ ಫಿರ್ಯಾದುವನ್ನು ದಾಖಲಿಸುವಾಗ ದೂರಿಗೆ ನಾನೇ ಸಹಿ ಮಾಡಿರುತ್ತೇನೆ. ಈ ದೂರನ್ನು ದಾಖಲಿಸಲು ಸಾಕ್ಷಿ ಹೇಳಲು ನನಗೆ ಅಧಿಕಾರ ಇರುವುದಿಲ್ಲ ಎಂದರೆ ಸರಿಯಲ್ಲ. ಸಂಸ್ಥೆಯಿಂದ ಪ್ರತಿನಿಧಿಸಲು ನನಗೆ ಅಧಿಕಾರ ಕೊಟ್ಟಿರುತ್ತಾರೆ. ಅದರ ತಾರೀಖು, ಮಾಸ ಮತ್ತು ಇಸವಿ ಈಗ ಹೇಳಲು ಬರುವುದಿಲ್ಲ. ಅಧಿಕಾರವನ್ನು ಆಡಳಿತ ಮಂಡಳಿಯವರು ಕೊಟ್ಟಿರುತ್ತಾರೆ. ಆ ಅಧಿಕಾರ ಪತ್ರವನ್ನು ಹಾಜರುಪಡಿಸಲು ನನಗೆ ತೊಂದರೆ ಇಲ್ಲ. ನಾನು ಸಂಸ್ಥೆಯ ಉದ್ಯೋಗಿಯಾಗಿದ್ದು, ಆಡಳಿತ ಮಂಡಳಿಯ ಸದಸ್ಯನಲ್ಲದೇ ಇರುವುದರಿಂದ ನನಗೆ ಸಾಕ್ಷಿ ಹೇಳಲು ಹಾಗೂ ದೂರು ದಾಖಲಿಸಲು ಅಧಿಕಾರ ಇರುವುದಿಲ್ಲ ಎಂದರೆ ಸರಿಯಲ್ಲ. ಈ ವ್ಯವಹಾರಕ್ಕೆ ಸಂಬಂಧಪಟ್ಟ ದಾಖಲೆಗಳಾದ ರಸೀದಿಗಳು ಹಾಗೂ ಕಡ

ಮಾರಾಟ ಬಿಲ್ಲುಗಳಲ್ಲಿ ನನ್ನ ಸಹಿ ಇರುತ್ತದೆ. 57 ರಸೀದಿಗಳಲ್ಲಿ ನನ್ನ ಸಹಿ ಯಾವ ರಸೀದಿಯಲ್ಲಿ ಇರುತ್ತದೆ ಎಂದು ಈಗ ಹೇಳಲು ಸಾಧ್ಯವಿಲ್ಲ.

12. ನಾನು ಪಾಟೀ ಸವಾಲಿಗೆ ಹಾಜರಾಗುವ ಪೂರ್ವದಲ್ಲಿ ದಾಖಲೆಗಳನ್ನು ನೋಡಿ ಪಾಟಿ ಸವಾಲಿಗೆ ಸಜ್ಜಾಗಲು ಯಾವುದೇ ತೊಂದರೆ ಇರಲಿಲ್ಲ ಎಂದರೆ ಸರಿ. ಯಾವುದಾದರೂ ಅಗತ್ಯದ ಪ್ರಶ್ನೆಗಳಿಗೆ ಉತ್ತರ ಹೇಳಬೇಕಾಗುತ್ತದೆ ಎಂದು ದಾಖಲೆಗಳನ್ನು ನೋಡಿ ಹೇಳಬೇಕಾಗುತ್ತದೆ ಎಂದು ಉತ್ತರ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಆರೋಪಿತಳು ಚೆಕ್ಕು ಅಮಾನ್ಯತೆಯ ಪ್ರಕರಣವನ್ನು ಮಾಡಿರುವುದಿಲ್ಲ ಎಂದರೆ ಸರಿಯಲ್ಲ.

.

ಮರು ವಿಚಾರಣೆ - ಇಲ್ಲ.

ಓದಿ ಹೇ. ಕೇ. ಸರಿ ಇದೆ. ನನ್ನ ಹೇ. ಮೇ. ಬೆ. ಮಾಡಲಾಗಿದೆ

**2 ನೇ ಹೆಚ್ಚುವರಿ ಸಿವಿಲ್ ನ್ಯಾಯಾದೀಶರು**
**ಮತ್ತು ಜೆ.ಎಂ.ಎಫ್.ಸಿ. ಕುಂದಾಪುರ (C/c)**